	ಸಹಾಯಕ ಇಂಜಿನಿಯರ್	ಕಿರಿಯ ಇಂಜಿನಿಯರ್	ಒಟ್ಟು
ಕಾವೇರಿ ಜಲಾನಯನ ಏತ ನೀರಾವರಿ ನಿಗಮ, ಮೈಸೂರು	54	21	75
ಕೃಷ್ಣ ಜಲಾನಯನ ಏತ ನೀರಾವರಿ ನಿಗಮ,	49	21	70
ಒಟ್ಟು	**103**	**42**	**145**

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ನದಿಗೆ ಬ್ಯಾರೇಜ್ ನಿರ್ಮಾಣದ ಬಗ್ಗೆ

1338 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು), ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಕುಮದ್ವತಿ ನದಿಗೆ 1) ಯಲಿವಾಳ 2) ರಟ್ಟಿಹಳ್ಳಿ 3) ಕುಡಪಲಿಗಳಲ್ಲಿ ಬ್ಯಾರೇಜ್ಗಳನ್ನು ಕಟ್ಟುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ:

ಆ) ಇದ್ದಲ್ಲಿ ಸದರಿ ಮೂರು ಬ್ಯಾರೇಜ್ ಕಟ್ಟಲು ತಗಲುವ ವೆಚ್ಚ ಎಷ್ಟು.

ಇ) ಸರ್ಕಾರ ಕನಿಷ್ಟ ಪಕ್ಷ ಅತಿ ಅವಶ್ಯವಿರುವ ರಟ್ಟಿಹಳ್ಳಿ ಬ್ಯಾರೇಜ್ನಾದರೂ 1991-92ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿ ಕಾರ್ಯಗತಗೊಳಿಸಲು ನಿರ್ಧರಿಸಿದೆಯೆ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನೀತಿ ಹಾಗೂ ಕಾರ್ಯಕ್ರಮ ಏನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ರಟ್ಟಿಹಳ್ಳಿ ಮತ್ತು ಕುಡುಪಲಿಗಳಲ್ಲಿ ಬ್ಯಾರೇಜ್ ಕಟ್ಟುವ ಪ್ರಸ್ತಾವನೆ ಇವೆ. ಆದರೆ ಯಲಿವಾಳದಲ್ಲಿ ಬ್ಯಾರೇಜ್ ಕಟ್ಟುವ ಪ್ರಸ್ತಾವನೆ ಇಲ್ಲ.

ಆ) ಪ್ರತಿ ಬ್ಯಾರೇಜಿಗೆ 35 ಲಕ್ಷ ರೂಗಳೆಂದು ಅಂದಾಜುಮಾಡಲಾಗಿದೆ.

ಇ) ರೆಟ್ಟಿಹಳ್ಳಿ ಬ್ಯಾರೇಜ್ ಕಾಮಗಾರಿಯನ್ನು ಆಯವ್ಯಯದಲ್ಲಿ ಸೇರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಸದರಿ ಕಾಮಗಾರಿಯು ಆಯವ್ಯಯದಲ್ಲಿ ಸೇರಿದ ನಂತರ ವಿವರವಾದ ತನಿಖೆ ಕೈಗೊಂಡು ಅಂದಾಜು ಪತ್ರಿಕೆ ತಯಾರಿಸಿ ಕಾಮಗಾರಿಯು ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಸಾಧುವಾಗಿದ್ದಲ್ಲಿ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಕೆರೆ ದುರಸ್ತಿಯ ಬಗ್ಗೆ.

1337 - ಶ್ರೀ ಬಿ.ಹೆಚ್. ಬನ್ನಿಕೋಡ್ (ಪಿರೇಕೆಯಾರ್), ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಮದಗಮಸೂರು ಕೆರೆಯ ದುರಸ್ತಿ, ನೀರು ಕಾಲುವೆಗಳನ್ನು ವಿಸ್ತರಿಸುವುದು ಹಾಗೂ ನವೀಕರಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಕಾಮಗಾರಿಗೆ ತಗಲುವ ವೆಚ್ಚರೆಷ್ಟು?

ಇ) ಇದರಿಂದಾಗಿ ನೀರಾವರಿಯಾಗಲಿರುವ ಹೆಚ್ಚುವರಿ ಪ್ರದೇಶವೆಷ್ಟು?

ಈ) ಈ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಯವರು):

ಯೋಜನೆಯ ಪರ್ಯಾಯ ಪ್ರಸ್ತಾವಗಳು ಪರಿಶೀಲನೆಯಲ್ಲಿದೆ. ಯೋಜನೆಯ ಅಂತಿಮ ವರದಿ ತಯಾರಾದ ನಂತರ ಇದಕ್ಕೆ ತಗಲುವ ವೆಚ್ಚ ಮತ್ತು ನೀರಾವರಿಯಾಗಲಿರುವ ಹೆಚ್ಚುವರಿ ಪ್ರದೇಶಗಳ ವಿವರಗಳು ಗೊತ್ತಾಗುವುದು.

ಯುವಕರಿಗೆ ಸೂಕ್ತ ಸೌಲಭ್ಯಗಳಿಲ್ಲದಿರುವ ಬಗ್ಗೆ.

1357 - ಶ್ರೀ ಎಂ.ನಾರಾಯಣಸ್ವಾಮಿ (ಬೇತ ಮಂಗಲ), ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೋಲಾರದಲ್ಲಿ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಜಿಲ್ಲಾ ಯುವಜನ ಕೇಂದ್ರವನ್ನು ಎಂದು ನಿರ್ಮಿಸಲಾಯಿತು.

ಆ) ಈ ಯುವಜನ ಕೇಂದ್ರವನ್ನು ಪ್ರಾರಂಭಿಸಿದಾಗಿನಿಂದ ಇಲ್ಲಿಯವರೆವಿಗೆ ನಿರ್ವಹಣೆಗಾಗಿ ಇಲಾಖೆಯಿಂದ ಕೊಟ್ಟಿರುವ ಹಣ ಎಷ್ಟು?

ಇ) ಈ ಯುವಜನ ಕೇಂದ್ರದಲ್ಲಿ ಕ್ರೀಡಾಪಟುಗಳಿಗೆ ಹಾಗೂ ದೈಹಿಕ ಕಸರತ್ತು ಮಾಡುವ ಯುವಕರ ಅನುಕೂಲಕ್ಕಾಗಿ ಯಾವುದೇ ಸೌಲಭ್ಯಗಳನ್ನು ಕಲ್ಪಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಸೌಲಭ್ಯಗಳನ್ನು ಕಲ್ಪಿಸಿದ್ದರೆ ಈಗ ಯುವಜನ ಕೇಂದ್ರದಲ್ಲಿ ದೈಹಿಕ ಕಸರತ್ತು ಹಾಗೂ ಕ್ರೀಡಾ ಪಟುಗಳಿಗೆ ಅಭ್ಯಾಸ ಮಾಡಲು ಯಾವ ಯಾವ ಸೌಲಭ್ಯಗಳಿವೆ?

ಉ) ಈ ಕೇಂದ್ರದಲ್ಲಿರುವ ಷಟಲ್ ಕೋರ್ಟ್ ದುರಸ್ಥಿತಿಯಲ್ಲಿದ್ದರೂ ಅದನ್ನು ಸರಿಪಡಿಸಲು ಇಲಾಖೆಯು ಇದುವರೆವಿಗೂ ಕ್ರಮಕೈಗೊಳ್ಳದಿರಲು ಕಾರಣಗಳೇನು?

ಊ) ಯುವಜನ ಕೇಂದ್ರಗಳಲ್ಲಿ ಯುವಕರಿಗೆ ಹಾಗೂ ಕ್ರೀಡಾಪಟುಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ವಿಫಲವಾಗಿರುವ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತಕ್ರಮ ಕೈಗೊಳ್ಳುವರೆ?

ಶ್ರೀ ಎಸ್. ರಮೇಶ್ (ವಾರ್ತಾ ಪ್ರವಾಸೋದ್ಯಮ ಹಾಗೂ ಯುವಜನ ಕ್ರೀಡಾ ಮತ್ತು ಕ್ರೀಡಾ ಇಲಾಖೆ ಸಚಿವರು)

ಅ) ದಿನಾಂಕ: 1-4-1980 ರಂದು

ಆ) 92,050 ರೂಪಾಯಿಗಳು.

ಇ) ಜಿಲ್ಲಾ ಯುವಜನಸೇವಾ ಕೇಂದ್ರದಲ್ಲಿ ಟೇಬಲ್ ಟೆನ್ನಿಸ್,ಬ್ಯಾಡ್ಮಿಂಟನ್ ಹಾಗೂ ಭಾರ ಎತ್ತುವ ಸೌಲಭ್ಯಗಳನ್ನು ಒದಗಿಸಲಾಗಿದೆ. ಹೊಸ ಉಪಕರಣಗಳನ್ನು ಕೊಳ್ಳಲು ಜಿಲ್ಲಾಪರಿಷತ್ತಿಂದ ಹಣ ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಉ) 1991-92ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತಿನ ಯೋಜನೆಯ ಅಡಿಯಲ್ಲಿ ಈ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದೆ.

ಊ) ಅಗತ್ಯವಾಗಿರುವ ಸೌಲಭ್ಯಗಳನ್ನು ನೀಡಲಾಗಿದ್ದು,ಉಳಿದ ಸೌಲಭ್ಯಗಳನ್ನು ಕೊಡಲು ಕ್ರಮ ತೆಗೆದುಕೊಳ್ಳಲಾಗುವುದು

ಕಳ್ಳತನಗಳು ಹಾಗೂ ರಸ್ತೆ ದರೋಡೆಗಳ ಬಗ್ಗೆ.

1358 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ), ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?